RNU AIR DHARWAD

OCTOBER 18, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ಕೈಗಾರಿಕಾ ಅಭಿವೃದ್ಧಿಯ ಜೊತೆಗೆ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ, M.S.M.E.ಗಳಿಗೆ, ಪರಿಸರ ನಿಯಮಗಳ ಅನುಕೂಲಕರ ಅನುಸರಣೆ ವ್ಯವಸ್ಥೆಯನ್ನು ಜಾರಿಗೊಳಿಸಲು, ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ – ಕಾಸಿಯಾ, ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ಕಾಸಿಯಾ ಅಧ್ಯಕ್ಷ ನಿಂಗಣ್ಣ ಬಿರಾದಾರ ನೇತೃತ್ವದ ನಿಯೋಗ, ಪರಿಸರ ಖಾತೆ ಸಚಿವ, ರಾಮಲಿಂಗಾ ರೆಡ್ಡಿ ಅವರೊಂದಿಗೆ, ಬೆಂಗಳೂರಿನ ವಿಕಾಸಸೌಧದಲ್ಲಿ, ದುಂಡುಮೇಜಿನ ಸಭೆ ನಡೆಸಿ, ಮನವಿ ಸಲ್ಲಿಸಿತು. ಕಾಸಿಯಾ ಮನವಿಗೆ ಸ್ಪಂದಿಸಿದ ಸಚಿವರು, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ, 'ಕನ್ಸೆಂಟ್ ಮೇಳಾ' ಆಯೋಜಿಸಲಾಗುವುದು ಎಂದು, ಘೋಷಿಸಿದರು.

<><><>

ರೈತರಿಗೆ ವಿದ್ಯುತ್ ಪೂರೈಕೆಗಾಗಿ, ರಾಜ್ಯ ಸರ್ಕಾರ ವಾರ್ಷಿಕ ಸುಮಾರು 22 ಸಾವಿರ ಕೋಟಿ ರೂಪಾಯಿ ವೆಚ್ಚ ಮಾಡುತ್ತಿದೆ. ಪ್ರಸ್ತುತ ರೈತರು ಹಾಗೂ ಕೃಷಿ ಆಧಾರಿತ ಕೈಗಾರಿಕೆಗಳ ಸಮಸ್ಯೆಗಳನ್ನು ಪರಿಹರಿಸಲು ಎಲ್ಲರ ಸಹಕಾರದ ಅಗತ್ಯವಿದೆ ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ತಿಳಿಸಿದ್ದಾರೆ. ರಾಜ್ಯದ ವಿವಿಧ ತಾಲೂಕುಗಳಲ್ಲಿ ಬರಗಾಲ ಘೋಷಣೆ ಮಾಡಲಾಗಿದೆ. ಬರ ಪರಿಹಾರಕ್ಕಾಗಿ ಪ್ರಧಾನಮಂತ್ರಿಯವರ ಭೇಟಿಗೆ ಸಮಯ ಕೋರಲಾಗಿದೆ. ಕೇಂದ್ರ ಗೃಹ ಖಾತೆ ಸಚಿವರನ್ನೂ ಭೇಟಿ ಮಾಡಿ, ರಾಜ್ಯಕ್ಕೆ ಅಗತ್ಯ ನೆರವು ನೀಡುವಂತೆ ಮನವಿ ಸಲ್ಲಿಸಲಾಗುವುದು ಎಂದು ಅವರು ತಮ್ಮ ಎಕ್ಸ್ ಖಾತೆ ಮೂಲಕ ತಿಳಿಸಿದ್ದಾರೆ.

<><><>

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮದ ಭಾಗವಾಗಿ, ನಗರದ ಬನ್ನಿಮಂಟಪದ, ಪಂಜಿನ ಕವಾಯತು ಮೈದಾನದಲ್ಲಿ ಬೃಹತ್ ಡ್ರೋನ್ ಪ್ರದರ್ಶನ ಆಯೋಜಿತವಾಯಿತು. ಒಟ್ಟು 3 ಸಾವಿರದ 500 ಡ್ರೋನ್‌ಗಳು ಏಕಕಾಲಕ್ಕೆ ಆಗಸಕ್ಕೇರಿ, ಬಣ್ಣಬಣ್ಣದ ಎಲ್‌ಇಡಿ ದೀಪಗಳ ಮೂಲಕ 12 ವಿಭಿನ್ನ ವಿನ್ಯಾಸಗಳನ್ನು ಮೂಡಿಸಿದವು. ಕತ್ತಲ ಆಗಸದಲ್ಲಿ ರಾಷ್ಟ್ರೀಯ ಪಕ್ಷಿ ನವಿಲು, ಕಾಡಿನ ರಾಜ ಸಿಂಹ, ಆಕ ್ಕ ಚಿಟ್ಟೆ, ಗ್ಯಾಲಕ್ಸಿ ಹಾಗೂ ದೇಶದ ಹೆಮ್ಮೆಯ ಸೈನಿಕರ ಚಿತ್ರಗಳು ಕಣ್ಮನ ಸೆಳೆದವು. ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಆಯೋಜಿಸಿರುವ ಆಹಾರ ಮೇಳಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ ಯತೀಂದ್ರ ಸಿದ್ದರಾಮಯ್ಯ ಭೇಟಿ ನೀಡಿ, ವಿವಿಧ ಆಹಾರ ಮಳಿಗೆಗಳನ್ನು ವೀಕ್ಷಿಸಿದರು. ಇಂದು ಮೈಸೂರು ಸಾತಗಳ್ಳಿ, ವಿ.ಟಿ ಯು ಕಾಲೇಜು ಸಮೀಪ, ಕೋಣಗಳ ಓಟ ಸ್ಪರ್ಧೆ, 'ಕಂಬಳ' ಆಯೋಜಿತವಾಗಿದೆ.

<><><>

ವಿ 'ನ್ ದಾವಣಗೆರೆ, ಕರ್ನಾಟಕ ಡಿಜಿಟಲ್ ಎಕಾನಮಿ ಮಿ 'ನ್ ಸಹಯೋಗದಲ್ಲಿ ದಾವಣಗೆರೆಯಲ್ಲಿ ನಾಳೆ, ಸ್ಟಾರ್ಟ್‌ಅಪ್ ಪಿಚ್ಚಿಂಗ್ ಕಾರ್ಯಕ್ರಮ, ಆಯೋಜಿಸಿದೆ. ನವೋದ್ಯಮಿಗಳು, ತಮ್ಮ ನೂತನ ಆವಿ ಷ್ಕಾರಗಳು ಹಾಗೂ ಉದ್ಯಮ ಪರಿಕಲ್ಪನೆಗಳನ್ನು, ತಜ್ಞರ ಸಮಿತಿಯ ಮುಂದೆ ಪ್ರಸ್ತುತಪಡಿಸಲು ಅವಕಾಶವಿದೆ. ಆಯ್ಕೆಯಾಗುವ ನವೋದ್ಯಮಿಗಳಿಗೆ, 'ಬೆಂಗಳೂರು ಟೆಕ್ ಸಮ್ಮಿಟ್–20'26 ನಲ್ಲಿ ತಮ್ಮ ಉತ್ಪನ್ನಗಳು ಹಾಗೂ ಸೇವೆಗಳನ್ನು ಪ್ರದರ್ಶಿಸಲು, ಪ್ರತ್ಯೇಕ ಪ್ರದರ್ಶನ ಮಳಿಗೆ ಪಡೆಯುವ, ಅವಕಾಶ ಕಲ್ಪಿಸಲಾಗಿದೆ.

<><><>

'ಖೇತ್ ಬಚಾವೋ ಅಭಿಯಾನ', ಈ ತಿಂಗಳ 22 ರಿಂದ, ಮುಂದಿನ ತಿಂಗಳ 30 ರ ವರೆಗೆ ನಡೆಯಲಿದೆ. ಸುಧಾರಿತ ಕೃಷಿ ಪದ್ಧತಿಗಳು, ಉತ್ಪಾದಕತೆ ಹೆಚ್ಚಳ, ಸುಸ್ಥಿರ ಕೃಷಿ ಮತ್ತು ಕೇಂದ್ರ ಸರ್ಕಾರದ ರೈತಪರ ಯೋಜನೆಗಳ ಕುರಿತು, ರೈತರಲ್ಲಿ ವ್ಯಾಪಕ ಜಾಗೃತಿ ಮೂಡಿಸುವುದು ಈ ಅಭಿಯಾನದ ಉದ್ದೇಶವಾಗಿದೆ.

<><><>

ರಾಯಚೂರು ಜಿಲ್ಲೆ ವ್ಯಾಪ್ತಿಯಲ್ಲಿ, ಕನಿ ್ಠ ಬೆಂಬಲ ಬೆಲೆ ಯೋಜನೆಯಡಿ, ಹತ್ತಿಯನ್ನು ಖರೀದಿಸುವ ಪ್ರಕ್ರಿಯೆ, 22 ರಿಂದ ಪ್ರಾರಂಭವಾಗಲಿದೆ. ಎಲ್ಲ ಹತ್ತಿ ಬೆಳೆಗಾರರು, ಈ ತಿಂಗಳ 31 ರೊಳಗೆ 'ಕಪಾಸ್ ಕಿಸಾನ್' ಆಪ್‌ನಲ್ಲಿ ಹೆಸರು ನೋಂದಾಯಿಸಿಕೊಳ್ಳುವಂತೆ ಭಾರತೀಯ ಹತ್ತಿ ನಿಗಮದ ಪ್ರಕಟಣೆ ತಿಳಿಸಿದೆ.

<><><>

ವಿಜಯನಗರ ಜಿಲ್ಲೆ, ಹೊಸೂರು ಗ್ರಾಮದಲ್ಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಹಾಗೂ ಅಜೀಂ ಪ್ರೇಮ ಜಿ ಫೌಂಡೇಶನ್ ಸಹಯೋಗದಲ್ಲಿ, ಬಾಲ ಮೇಳ ಕಾರ್ಯಕ್ರಮ ಆಯೋಜಿತವಾಯಿತು.

<><><>

ಚಿತ್ರದುರ್ಗ ಜಿಲ್ಲೆ, ಮರುಘಾಮಠದ ಅನುಭವ ಮಂಟಪದಲ್ಲಿ ಆಯೋಜಿತ, ಶರಣ ಸಂಸ್ಕೃತಿ ಉತ್ಸವದಲ್ಲಿ, ರಾಷ್ಟ್ರಕವಿ ಬಿರುದಾಂಕಿತ ಜಿ.ಎಸ್ ಶಿವರುದ್ರಪ್ಪ ಮತ್ತು ನಾಡಿನ ಹಿರಿಯ ಪತ್ರಕರ್ತರಾಗಿದ್ದ ವೈ.ಎನ್ ಕೃಷ್ಣಮೂರ್ತಿ ಅವರ ಜನ್ಮಶತಮಾನೋತ್ಸವ ಹಾಗೂ ಫ.ಗು ಹಳಕಟ್ಟಿ ಶಿವಾನುಭವ ಪತ್ರಿಕೆ, ಎಸ್.ನಿಜಲಿಂಗಪ್ಪ 125 ಕೃತಿ ಲೋಕಾರ್ಪಣೆ ಕಾರ್ಯಕ್ರಮ ಜರುಗಿತು.

<><><>

ರಾಜ್ಯದ ದಕ್ಷಿಣ ಒಳನಾಡು, ಪ್ರದೇಶಗಳಲ್ಲಿ, ಇಂದು ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

<><><>

'ಕಾರ್ಮಿಕರ ಭವಿ ್ಯ ನಿಧಿ ಸಂಸ್ಥೆ', ಬಳ್ಳಾರಿ ಪ್ರಾದೇಶಿಕ ಕಚೇರಿ, ಬಳ್ಳಾರಿ, ವಿಜಯನಗರ, ಕೊಪ್ಪಳ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ, ಈ ತಿಂಗಳ 27ನೇ ತಾರೀಖು, 'ನಿಧಿ ಆಪ್ಕೆ ನಿಕಟ್' ಕಾರ್ಯಕ್ರಮ ಆಯೋಜಿಸಿದೆ ಎಂದು, ಭವಿ ್ಯ ನಿಧಿ ಪ್ರಾದೇಶಿಕ ಆಯುಕ್ತ ಕೆ.ವಿ. ಪ್ರವೀಣ ತಿಳಿಸಿದ್ದಾರೆ. ಅಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 6ರ ವರೆಗೆ ಕಾರ್ಯಕ್ರಮ ನಡೆಯಲಿದೆ. ಕಾರ್ಮಿಕರು, ಪಿಂಚಣಿದಾರರು ಹಾಗೂ ಉದ್ಯೋಗದಾತರ ಕುಂದುಕೊರತೆಗಳನ್ನು ಪರಿಹರಿಸಲು, ವೇದಿಕೆ ಕಲ್ಪಿಸಲಾಗಿದೆ, ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>